INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,74-82
Peer Reviewed Journal, Referred Journal

# ಡಾ.ಎಂ.ವೀರಪ್ಪ ಮೊಯಿಲಿ ಅವರ ಸಾಹಿತ್ಯ ಕೃಷಿಯಲ್ಲಿ ಕಾದಂಬರಿ: ಒಂದು ಅವಲೋಕನ

**ಕೃತಿ.ಜಯಕುಮಾರ್.**[1]

ಡಾ. ಎಂ.ವೀರಪ್ಪ ಮೊಯಿಲಿ ಅವರು ಸಾರ್ವಜನಿಕ ಜೀವನದಲ್ಲಿ ಒಬ್ಬ ಸಕ್ರಿಯ ರಾಜಕಾರಣದ ರಾಜಕಾರಣಿ. ಆದರೂ ಕೂಡ ತಮ್ಮ ಬಿಡುವಿಲ್ಲದ ಸಮಯದಲ್ಲಿ ಬಿಡುವು ಮಾಡಿಕೊಂಡು ಪ್ರವೃತ್ತಿಯಲ್ಲಿ ಸಾಹಿತ್ಯದ ಪ್ರಕಾರಗಳಾದಂತಹ ಕವನ, ಕಾದಂಬರಿ, ನಾಟಕ, ಮಹಾಕಾವ್ಯಗಳನ್ನು ರಚನೆಗೈದಿರುವುದೇ ಅವರ ಸೃಜನಶೀಲ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ. "ಶ್ರೀರಾಮಾಯಣ ಮಹಾನ್ವೇಷಣಂ" ಕೃತಿಯ ಮೂಲಕ ತಿರುಸ್ಕೃತ ಲೋಕ ಒಂದರ ವಿವರಗಳನ್ನು ವಿವರಿಸುವುದರ ಜೊತೆಗೆ ದಲಿತ ಲೋಕದ ಸಂವೇದನೆಗಳನ್ನು ದಾಖಲಿಸಿದ್ದಾರೆ. ಪುರಾಣ ಕಾವ್ಯವೊಂದರ ಮೂಲಕ ಸಮಾಜದಲ್ಲಿ ಇಂದಿಗೂ ಬೇರೂರಿರುವ ತಾರತಮ್ಯತೆಯ ಭಾವವನ್ನು, ಮಹಿಳಾ ಶೋಷಣೆಯನ್ನು, ಪ್ರಜಾಪ್ರಭುತ್ವದ ಸ್ಥಾಪನೆ, ಅಧಿಕಾರ ತ್ಯಾಗ ಇನ್ನೂ ಮುಂತಾದವುಗಳನ್ನು ಮಹಾಕಾವ್ಯವೊಂದರ ಮೂಲಕ ಐದು ಸೋಪಾನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಒಬ್ಬ ಕವಿಯಾಗಿ ಭಾರತದ ಬದುಕಿನ ಧಾರುಣಾ ಚಿತ್ರಣಗಳನ್ನು, ಬದುಕಿನ ಮೊಗ್ಗಲುಗಳನ್ನು, ಸತಿಪತಿಗಳೊಂದಾಗಿ ಹಾಲುಜೇನು ಎನ್ನುವ ಕವನ ಸಂಕಲನದಲ್ಲಿ ನೀಡಿದ್ದಾರೆ.

ಹಾಗೆಯೇ, ಆಧುನಿಕ ಕಾಲದ ಸಾಮಾಜಿಕ, ರಾಜಕೀಯ, ಸಮಸ್ಯೆಗಳ ಕುರಿತಲ್ಲದೇ ಸಾಮಾಜಿಕ ಪಿಡುಗಗಳಾದ ಅಸ್ಪೃಶ್ಯತೆ, ಧರ್ಮಾಂಧತೆ, ಕೋಮುವಾದದ ತಿರಸ್ಕಾರ, ಮಹಿಳೆಯರಿಗೆ ಸಮಾನ ಹಕ್ಕುಗಳ ಘೋಷಣೆ ಮುಂತಾದ ಅಂಶಗಳು ಅವರ ಸಮಗ್ರ ಕಾದಂಬರಿಗಳಲ್ಲಿ ಕಾಣುತ್ತೇವೆ. ವೀರಪ್ಪ ಮೊಯಿಲಿಯವರು ಸಂಖ್ಯೆಯ ದೃಷ್ಟಿಯಿಂದ ನಾಲ್ಕು ಕಾದಂಬರಿಗಳನ್ನು ಬರೆದಿದ್ದರೂ, ಸಾಹಿತ್ಯದ ದೃಷ್ಟಿಯಿಂದ ಮಹತ್ವವಾಗಿವೆ. ಈ ನಾಡಿನ ಶೋಷಿತ ವರ್ಗದ ಸುಸಂಸ್ಕೃತ ರಾಜಕಾರಣಿಯಾದ ಎಂ.ವೀರಪ್ಪ ಮೊಯಿಲಿಯವರು ವಿಭಿನ್ನ ವ್ಯಕ್ತಿತ್ವ ಉಳ್ಳವರು. ಶಾಸಕರಾಗಿ, ಸಚಿವರಾಗಿ, ನಾಡಿನ ಮುಖ್ಯಮಂತ್ರಿಯಾಗಿ ಅಲ್ಲದೇ ಕೇಂದ್ರದ ಮಂತ್ರಿಯಾಗಿ, ವಿವಿಧ ಆಯೋಗಗಳ ಅಧ್ಯಕ್ಷರಾಗಿ, ಸುಸಂಸ್ಕೃತ ರಾಜಕೀಯ ಸೇವೆಯ ಮೂಲಕ ಕನ್ನಡ ನಾಡಿನ ಜನಮನದಲ್ಲಿ ಮನೆ

---

1. **ಸಂಶೋಧಕರು**, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

ಮಾಡಿದ್ದಾರೆ. ಅಷ್ಟೇ ಅಲ್ಲದೇ ಕವಿ, ನಾಟಕಕಾರರು, ಕಾದಂಬರಿಕಾರರು ಆಗಿರುವ ಮೊಯಿಲಿಯವರ ವ್ಯಕ್ತಿತ್ವ ಭಿನ್ನತೆಗಳನ್ನು ಹೊಂದಿದೆ. "ರಾಜಕಾರಣಿಗಳಿಗೆ ಬೆಳ್ಳಿಯ ಕಿರೀಟ, ಗದೆ ಅರ್ಪಣೆ ಹಾಗೂ ತುಲಾಭಾರ ಅರ್ಪಣೆ ಇತ್ಯಾದಿಗಳ ಮೂಲಕ ಸಲ್ಲುವ ಸನ್ಮಾನಗಳನ್ನು ನಾವು ಪ್ರತಿನಿತ್ಯ ನೋಡುತ್ತೇವೆ. ಆದರೆ ವೀರಪ್ಪ ಮೊಯಿಲಿ ಅವರನ್ನು ಇಂದು ನಾವು ಸನ್ಮಾನಿಸುತ್ತಿರುವ ರೀತಿಯೇ ಬೇರೆ. ಅವರಿಗೆ ಬೆಳ್ಳಿಯ ಕಿರೀಟ, ಗದೆಗಳನ್ನು ಅರ್ಪಿಸುವ ಬದಲು ಶಬ್ದಗಳ ಕಿರೀಟಗಳನ್ನು ಅರ್ಪಿಸುತ್ತಿದ್ದೇವೆ. ಅವರನ್ನು ತಕ್ಕಡಿಯಲ್ಲಿಟ್ಟು ತುಲಾಭಾರ ಮಾಡುವ ಬದಲು ಅವರ ಪ್ರತಿಭೆಯನ್ನು ವಿಮರ್ಶಾ ತಕ್ಕಡಿಯಲ್ಲಿಟ್ಟು ತೂಕ ಮಾಡಿ ನೋಡುತ್ತಿದ್ದೇವೆ."[3]

ಸಾಮಾನ್ಯ ದೃಷ್ಟಿಯಿಂದ ಸಾಮಾನ್ಯ ರಾಜಕಾರಣಿಗಳ ಬದುಕನ್ನು ನೋಡುವ ಯಾರಿಗೇ ಆಗಲಿ ಮೊಯಿಲಿ ಅವರು ಅಪರೂಪದ ರಾಜಕಾರಣಿಯಾಗಿ ಕಂಡುಬರುತ್ತಾರೆ. ಅವರ ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರಗಳ ದ್ವಿಮುಖ ಸಾಧನೆಯೇ ಇದಕ್ಕೆ ಕಾರಣ. ತಮ್ಮ ರಾಜಕೀಯ ಸಾಧನೆಯಿಂದ ವೀರಪ್ಪ ಮೊಯಿಲಿಯವರು ಒಬ್ಬ ಉತ್ತಮ ರಾಜಕೀಯ ಪಟುವಾಗಿ ಕಂಡಿರುವುದರ ಜೊತೆಗೆ ಸಾಹಿತ್ಯದ ಸಾಧನೆಯಿಂದ ಒಬ್ಬ ಪ್ರತಿಭಾಶಾಲಿ ಬರಹಗಾರರಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಕಂಗೊಳಿಸುತ್ತಿದ್ದಾರೆ.[3] ಕವಿ, ಸಾಹಿತಿ, ಕಾದಂಬರಿಕಾರರಾದ ಮೊಯಿಲಿಯವರು ತಮ್ಮ ಸಾಹಿತ್ಯದುದ್ದಕ್ಕೂ ಜೀವಪರ ಚಿಂತಕರಾಗಿ ಕಂಗೊಳಿಸುತ್ತಿದ್ದಾರೆ. ತಮ್ಮ ಧ್ಯೇಯ ಧೋರಣೆ, ನಿಲುವು, ಸಾಮಾಜಿಕ ಕಳಕಳಿಯನ್ನು ತಮ್ಮ ಕಾದಂಬರಿಯ ಮೂಲಕ ಹೊರಹಾಕಿದ್ದಾರೆ. ಸಮಾಜದಲ್ಲಿನ ಅಸ್ಪೃಶ್ಯತೆ, ಧರ್ಮಾಂಧತೆ, ಕೋಮುವಾದದ ತಿರಸ್ಕಾರ, ಮಹಿಳೆಯರಿಗೆ ಸಮಾನ ಸ್ಥಾನಮಾನ ಮುಂತಾದವುಗಳು ಮೊಯಿಲಿ ಅವರ ಕಾದಂಬರಿದುದ್ದಕ್ಕೂ ಕಾಣುತ್ತೇವೆ.

ಕಳೆದ ಶತಮಾನದ ಮೂರನೆಯ ದಶಕದ ಸುಮಾರಿಗೆ ಕನ್ನಡ ಕಾದಂಬರಿ ಪ್ರಾರಂಭದ ಅನಿಶ್ಚಿತತೆಯಿಂದ ಪಾರಾಗಿ ವಾಸ್ತವದ ರಾಜಮಾರ್ಗವನ್ನಾಯ್ದುಕೊಂಡಿತು. ಹೀಗಾಗುವುದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಮೊದಲನೆಯದು ಹತ್ತೊಂಬತ್ತನೆಯ ಶತಮಾನದ ಯೂರೊಪಿಯನ್ ಕಾದಂಬರಿಯ ಪ್ರಭಾವ. ಎರಡನೆಯದು, ಸ್ವಾತಂತ್ರ್ಯ ಚಳುವಳಿಯ ಮೂಲಕವಾಗಿ ಭಾರತೀಯ ಲೇಖಕರು ತಮ್ಮ ಸಂಸ್ಕೃತಿಯ ಮೂಲಗಳತ್ತ ತಿರುಗಿದುದು ಹಾಗೂ ಅದರ ಶೋಧದಲ್ಲಿ ತೊಡಗಿಕೊಂಡುದುದು. ವಾಸ್ತವಮಾರ್ಗದ ಶ್ರೇಷ್ಠ ಕಾದಂಬರಿಕಾರರಾದ ಕುವೆಂಪು, ಕಾರಂತ, ಅನಕೃ, ಗೋಕಾಕ ಹಾಗೂ ಶ್ರೀರಂಗರ ಮಹತ್ವದ ಕಾದಂಬರಿಗಳನ್ನು ಗಮನಿಸುವುದರ ಮೂಲಕ ಈ ಮಾತನ್ನು ಸ್ಪಷ್ಟಗೊಳಿಸಬಹುದು. ಆಧುನಿಕ ಕಾಲದ ಕಾದಂಬರಿಗಳನ್ನು ಅವುಗಳ ಗುಣಲಕ್ಷಣ, ರೂಪರಚನೆ, ಕಾಲಘಟ್ಟಗಳ ಆಧಾರದ ಮೇಲೆ ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ ಮುಂತಾದ ಕಾದಂಬರಿಗಳೆಂದು ಸಾಹಿತ್ಯ ವಿದ್ವಾಂಸರು ವಿಂಗಡಿಸಿದ್ದಾರೆ. ಆದರ್ಶ ಜೀವನ, ದೇಶಭಕ್ತಿ, ಭಾರತೀಯ ಸಂಸ್ಕೃತಿ, ತ್ಯಾಗಬಲಿದಾನಗಳೇ ನವೋದಯ ಕಾಲದ ಕಾದಂಬರಿಗಳ ಮುಖ್ಯ ಧ್ಯೇಯವಾಗಿವೆ. ಹಳೇ

ಮೌಲ್ಯಗಳಿಗೆ ತಿಲಾಂಜಲಿ ಇಡುತ್ತ, ಹೊಸ ಮೌಲ್ಯಗಳನ್ನು ಸೃಷ್ಟಿಸುವುದು ವ್ಯಕ್ತಿಯ ಪ್ರಾಧಾನ್ಯತೆ, ಯಾಂತ್ರಿಕ ಬದುಕಿನಿಂದ ರಾಜಕೀಯ ಹಿಡಿತದಿಂದ ಹೊರಬಂದು ತನ್ನ ಏಳ್ಗೆಯನ್ನು ತಾನೇ ಕಂಡುಕೊಳ್ಳುವುದು, ಪಾಶ್ಚಿಮಾತ್ಯ ಪ್ರಭಾವದಿಂದಾಗಿ ಭದ್ರವಾಗಿದ್ದ ಜೀವನ ಛಿದ್ರವಾಗುವುದು. ಬದುಕಿನ ಏಳ್ಗೆಗಾಗಿ ಉಂಟಾಗುವ ಸಂಘರ್ಷಗಳು ಈ ರೀತಿಯ ಧೋರಣೆಗಳು ನವ್ಯ ಕಾದಂಬರಿಗಳದ್ದಾಗಿದೆ. ನವ್ಯ ಕಾದಂಬರಿಕಾರರಾದ ಯಶವಂತ ಚಿತ್ತಾಲ, ಅನಂತಮೂರ್ತಿ, ಲಂಕೇಶ, ಶಾಂತಿನಾಥ ದೇಸಾಯಿ, ಚದುರಂಗ, ತೇಜಸ್ವಿ, ಗೋಕಾಕ್, ಸಾ.ರಾ.ಅಬುಬಕರ್, ವೈದೇಹಿ ಮುಂತಾದ ಅನೇಕ ಜನ ಲೇಖಕರು ಉತ್ತಮ ಕಾದಂಬರಿಗಳನ್ನು ಕನ್ನಡ ಸಾಹಿತ್ಯಲೋಕಕ್ಕೆ ನೀಡಿದ್ದಾರೆ. ಇಂತಹದೇ ಸಾಲಿಗೆ ಸೇರುವ ಅತಿ ಹಿಂದುಳಿದ ವರ್ಗದಲ್ಲಿ ಜನಿಸಿ, ಕಡುಬಡತನದಲ್ಲಿ ಬೆಳೆದು ಹೋರಾಟದ ಮೂಲಕ ಬದುಕನ್ನು ರೂಪಿಸಿಕೊಂಡು ರಾಜಕಾರಣಿಯಾಗಿ ಸಾಂಸ್ಕೃತಿಕ ಮನಸ್ಸುಳ್ಳ ವೀರಪ್ಪ ಮೊಯಿಲಿಯವರು ಉತ್ತಮ ನವ್ಯ ಕಾದಂಬರಿಕಾರರಾಗಿದ್ದಾರೆ.

ಮೊಯಿಲಿ ಅವರ ಕಾದಂಬರಿಗಳನ್ನು ಒಳಹೊಕ್ಕು ನೋಡಿದಾಗ; ಅವುಗಳಲ್ಲಿರುವ ಕರಾವಳಿಯ ಸಾಂಸ್ಕೃತಿಕ ಚಿತ್ರಣಗಳನ್ನು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಕರಾವಳಿಯ ಜನಪದವು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದು, ಇಲ್ಲಿ ಬರುವ ಕಂಬಳ, ಭೂತಾರಾಧನೆ, ಗಂಗೆಪೂಜೆ ಮುಂತಾದ ಜನಪದ ಆಚರಣೆ ಮತ್ತು ನಂಬಿಕೆಗಳನ್ನು ಇಲ್ಲಿರುವ ಯಜಮಾನ ಸಂಸ್ಕೃತಿಯನ್ನು ನಂಬಿಕೆಗಳ ಮೇಲೆ ಮೋಸಹೋಗುವ ಮುಗ್ಧ ಜನರ ಬದುಕಿನ ನೋವುಗಳ ಚಿತ್ರಣಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮೊಯಿಲಿಯವರ ಕಾದಂಬರಿಗಳ ಮೂಲಕಥಾವಸ್ತು ಕರಾವಳಿ ಪ್ರದೇಶದಲ್ಲಿ ಬರುವ ಬುಡಕಟ್ಟು ಜನರಾಗಿದ್ದಾರೆ. ಇಲ್ಲಿ ಬರುವ ಮೊಗವೀರರು, ಕೊರಗರು, ಜೇನುಕುರುಬಲ್ರು ಮುಂತಾದ ಬುಡಕಟ್ಟು ಜನಾಂಗದವರು ಸಾಮಾಜಿಕವಾಗಿ ಬಹಳ ಹಿಂದುಳಿದಿದ್ದಾರೆ. ಅವರ ಜೀವನ ವಿಧಾನಗಳು, ಬದುಕಿನ ವಿವಿಧ ಆಯಾಮಗಳು ಪ್ರಪಂಚಕ್ಕೆ ತಮ್ಮನ್ನು ತಾವು ಮುಕ್ತವಾಗಿ ತೆರೆದುಕೊಳ್ಳದೇ ರೂಢಿಯಿಂದ ಬಂದ ನಂಬಿಕೆ ಸಂಪ್ರದಾಯಗಳಲ್ಲೆ ತಮ್ಮನ್ನು ಸೀಮಿತಗೊಳಿಸಿಕೊಳ್ಳುವ ಬುಡಕಟ್ಟು ಜನರ ಸಂಸ್ಕೃತಿ ಚಲನಶೀಲತೆಯನ್ನು ಕಳೆದುಕೊಂಡು ಆಲೋಚನಾ ವಿಧಾನಗಳು, ಅವರ ಬದುಕು ಬವಣೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಮೊಯಿಲಿಯವರ ಕಾದಂಬರಿಗಳ ಕಥಾನಾಯಕರು ಕೆಳವರ್ಗದ ಬುಡಕಟ್ಟು ಜನಾಂಗದಿಂದ ಬಂದಿದ್ದಾರೆ. ಇವರು ಸಮಾಜದಿಂದ ತಿರಸ್ಕೃತಗೊಂಡ ಜನಾಂಗದವರಾಗಿದ್ದಾರೆ. ಈ ಪಾತ್ರಗಳು ಸ್ವ ಶಕ್ತಿಯ ಮೇಲೆ ಮೇಲಮುಖ ಚಲನೆಯೊಂದಿಗೆ ತಾವು ಒಬ್ಬರೇ ಬೆಳೆಯದೇ ತಾವು ಬೆಳೆದು, ತುಳಿತಕ್ಕೊಳಗಾದ ತಮ್ಮವರನ್ನು ಮೇಲೆತ್ತಬೇಕೆಂಬ ಆಶಯಗಳನ್ನು ವ್ಯಕ್ತಪಡಿಸುತ್ತವೆ. ಈ ಪಾತ್ರಗಳಲ್ಲಿರುವ ಸಮಷ್ಟಿ ಪ್ರಜ್ಞೆ ಲೋಕಕಲ್ಯಾಣದ ಆಶಯಗಳನ್ನು ಒಳಗೊಂಡಿವೆ. ಎಂತಹ ಕಷ್ಟ

ಬಂದರು ತಮ್ಮವರಿಗಾಗಿ ಮೀಸಲಿಡುವ ತಮ್ಮ5 ಬಲಿದಾನಕ್ಕೂ ಸಿದ್ಧವಾಗಿರುವ ಕಥಾನಾಯಕರು ಆದರ್ಶ ಜೀವಿಗಳಾಗಿದ್ದಾರೆ. ಮೊಯಿಲಿಯವರ ಕಾದಂಬರಿಯ ಬಹುಮುಖ್ಯ ಪಾತ್ರಗಳಲ್ಲಿ ಸ್ತ್ರೀ ಪರ ಚಿಂತನೆಯನ್ನು ಸಮಾಜದ ವಿರುದ್ಧ ಕೌಟುಂಬಿಕ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿ, ಸ್ವಾವಲಂಬಿ ಜೀವಿಯಾಗಿ ಬದುಕನ್ನು ಕಟ್ಟಿಕೊಳ್ಳುವ ಪರಿಯನ್ನು ಕುರಿತು ವಿಶ್ಲೇಷಿಣೆ ಮಾಡಲಾಗಿದೆ.

ಎಂ. ವೀರಪ್ಪ ಮೊಯಿಲಿಯವರು ಭವಿಷ್ಯದ ಚಿಂತನೆಗಳ ಬಗ್ಗೆ ಕನಸು ಕಾಣುತ್ತಾ ಆ ಕನಸುಗಳನ್ನು ನನಸಾಗಿಸುವ ಇಚ್ಛಾಶಕ್ತಿಯನ್ನು ಹೊಂದಿದವರಾಗಿದ್ದಾರೆ. ಅವರು ಅವರ ಕಾಲಘಟ್ಟದ ಸೂಕ್ಷ್ಮ ಸಂವೇದನೆ ಮತ್ತು ಮಾನವೀಯ ಮೌಲ್ಯಗಳ ಸ್ಪಂದನದ ನಾಯಕರು, ಬಡ ಹಿಂದುಳಿದ ವರ್ಗದ ಸಮುದಾಯದವರಾಗಿ ಶೋಷಣೆ ಏನೆಂಬುದನ್ನು ಅರಿತ ಲೇಖಕರು. ಶೋಷಿತ ಜನ, ಬುಡಕಟ್ಟಿನ ಸಮುದಾಯದಲ್ಲಿ ತನ್ನ ಪ್ರತಿಸ್ಪಂದನವನ್ನು ಕಂಡುಕೊಂಡಿದ್ದಾರೆ. ಸುದೀರ್ಘ ಮತ್ತು ಪುರಾತನ ಶೋಷಣೆಯಿಂದ ಬಳಲಿ ಹೋದ ದಲಿಗ್ತ ಸಮುದಾಯಕ್ಕೆ ನ್ಯಾಯ ಸಲ್ಲಿಸುವ ಹೋರಾಟದ ಪ್ರಬಲ ಆಯುಧವನ್ನಾಗಿ ತಮ್ಮ ಕಾದಂಬರಿಗಳನ್ನು ಪರಿವರ್ತಿಸಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ನಾಲ್ಕು ಕಾದಂಬರಿಗಳನ್ನು ನೀಡಿದ್ದಾರೆ. ಅವುಗಳೆಂದರೆ 'ಸುಳಿಗಾಳಿ' (1985), 'ಸಾಗರ ದೀಪ' (1986), 'ಕೊಟ್ಟ'
(1993) ಮತ್ತು 'ತೆಂಬರ' (1999). ಈ ಕಾದಂಬರಿಗಳು ಅಧ್ಯಯನದ ಪ್ರಧಾನ ವಿಷಯವಾಗಿದ್ದರಿಂದ ಇವುಗಳ ಕಥಾವಸ್ತು, ಪ್ರಾಯೋಗಿಕ ವಿಮರ್ಶೆಯನ್ನು ಈಅಧ್ಯಯನದಲ್ಲಿ ಸವಿವರವಾಗಿ ವಿಶ್ಲೇಷಿಸಲಾಗಿದೆ.

**'ಸುಳಿಗಾಳಿ' ಕಾದಂಬರಿಯ ಕಥಾವಸ್ತು**

'ಸುಳಿಗಾಳಿ' ಕಾದಂಬರಿಯು ವೀರಪ್ಪ ಮೊಯಿಲಿಯವರ ಮೊದಲ ಕಾದಂಬರಿಯಾಗಿದೆ. ಇದು ಸಾಮಾಜಿಕ ಕಥಾವಸ್ತುವನ್ನು ಹೊಂದಿದೆ. ರಾಮಪ್ಪ ಮತ್ತು ಕೆಂಚಮ್ಮನವರದು ಬಡತನವಾದರೂ ಸ್ವಾಭಿಮಾನದಿಂದ ಬದುಕುವ ಸುಸಂಸ್ಕೃತ ಕುಟುಂಬವಾಗಿದೆ. ರಾಮಪ್ಪನು ಎಷ್ಟೇ ಬಡತನವಿದ್ದರೂ ಮಾನ ಮಾರ್ಯಾದೆಗಳಿಂದ ಬದುಕುವ ವ್ಯಕ್ತಿಯಾಗಿದ್ದಾನೆ. ಪ್ರಾಮಾಣಿಕವಾಗಿ ಧಣಿಗಳ ಹೊಲಗದ್ದೆಗಳಲ್ಲಿ ದುಡಿದು ಬದುಕುವುದು ಅವನ ನಿತ್ಯ ಕಾಯಕವಾಗಿದೆ. ಮೋಸ ವಂಚನೆ ಅಧರ್ಮಗಳೆಂದರೆ ಅವನಿಗೆ ಆಗುವುದಿಲ್ಲ. ಅವನೊಬ್ಬ ಸ್ವಾಮಿನಿಷ್ಟ ಮತ್ತು ಪರೋಪಕಾರಿ ಬುದ್ಧಿವುಳ್ಳವನಾಗಿದ್ದಾನೆ. ಇವರಿಗೆ ದೇವಪ್ಪ, ಶೇಖರ, ಮಾಧವ ಎಂಬ ಮೂವರು ಮಕ್ಕಳಿರುತ್ತಾರೆ. ಹೀಗೆ ಹುಷುಔ\`ಟ್ಟು ದುಡಿದು ಸಂಸಾರ ನಡೆಸುತ್ತಿರಬೇಕಾದರೆ ಪ್ರಕೃತಿಯ ವಿಕೋಪಕ್ಕೆ ಆಘಾತವನ್ನು ಅನುಭವಿಸುತ್ತಾರೆ. ಒಂದು ದಿನ ಇದ್ದಕ್ಕಿದ್ದಂತೆ ಭೀಕರ ಬಿರುಗಾಳಿ ಗುಡುಗು ಮಿಂಚುಗಳಿಂದ ಕೂಡಿದ ಮಳೆ ರಾಮಪ್ಪನ ಬಡಮನೆಯನ್ನು ಬಲಿತೆಗೆದುಕೊಂಡು ಬಿಡುತ್ತದೆ. ಆಸರೆಯಾಗಿದ್ದ ಮನೆ ನೆಲಸಮವಾಗಿಬಿಡುತ್ತದೆ. ದುಡಿಯಲು ಹೋದ ರಾಮಪ್ಪ ಮತ್ತು ಮಗ ಶೇಖರ ಮನೆಗೆ ಬಂದು ನೋಡಿ

ದುಃಖಿತರಾಗುತ್ತಾರೆ. ಮಳೆಗಾಳಿಯ ರಭಸಕ್ಕೆ ಮನೆ ನೆಲಸಮವಾಗಿದ್ದರೂ, ದೇವರ ದಯೆಯಿಂದ ಕೆಂಚಮ್ಮ ಮಾತ್ರ ಬದುಕು ಉಳಿಯುತ್ತಾಳೆ. ಹಸುಗಳು ಬಿದ್ದ ಮನೆಯ ಒಳಗಡೆ ಸಾವುಬದುಕಿನ ನಡುವೆ ಹೋರಾಟ ನಡೆಸುತ್ತಿರುತ್ತವೆ. ಸುತ್ತಮುತ್ತಲಿನ ಜನ ಸೇರಿ ಅವುಗಳನ್ನು ಹೊರತೆಗೆದು ರಕ್ಷಣೆ ಮಾಡುತ್ತಾರೆ. ಬಂದ ಜನರೆಲ್ಲಾ ರಾಮಪ್ಪನ ಮತ್ತು ಅವನ ಕುಟುಂಬದವರಿಗೆ ಸಾಂತ್ವಾನ ಹೇಳುತ್ತಾರೆ. ಆದರೆ ಅವರು ಪ್ರಕೃತಿಯ ಹೊಡೆತಕ್ಕೆ ಸಿಕ್ಕು ಒಂದೇ ದಿನ ಅನಾಥರಾಗಿಬಿಡುತ್ತಾರೆ. ರಾಮಪ್ಪ ಮಾರ್ಯಾದೆಯಿಂದ ತನ್ನ ಬದುಕನ್ನು ಸಂಸಾರವನ್ನು ಕಟ್ಟಿಕೊಂಡಿದ್ದ. ಅವನ ಬೆಳೆದ ರೀತಿಯು ಧರ್ಮವನ್ನು ಅವಲಂಬಿಸಿತ್ತು. ಆದರೆ ಈಗ ಎಲ್ಲವೂ ಮಣ್ಣು ಪಾಲಾಗಿತ್ತು. ಇದರಿಂದ ತುಂಬಾ ನೋವನ್ನು ಅನುಭವಿಸಬೇಕಾಯಿತು. ಕಿರಿಯ ಮಗನಾದ ಮಾಧವನು ಶಾಲೆಗೆ ಹೋಗಿದ್ದ ಕಾರಣ ಆದ ಅನಾಹುತವೆಲ್ಲಾ ಆತನಿಗೆ ತಡವಾಗಿ ತಿಳಿಯಿತು.

ಈ ಕಾದಂಬರಿಗಳು ಅಧ್ಯಯನದ ಪ್ರಧಾನ ವಿಷಯವಾಗಿದ್ದರಿಂದ ಇವುಗಳ ಕಥಾವಸ್ತು, ಪ್ರಾಯೋಗಿಕ ವಿಮರ್ಶೆ, ಕಾದಂಬರಿಗಳ ಕೊಡುಗೆಗಳ ಬಗ್ಗೆ ಸವಿವರವಾಗಿ ವಿಶ್ಲೇಷಿಸಲಾಗಿದೆ. ಮೊಯಿಲಿಯವರು ಭವಿಷ್ಯದ ಚಿಂತನೆಗಳ ಬಗ್ಗೆ ಕನಸು ಕಾಣುತ್ತಾ ಆ ಕನಸುಗಳನ್ನು ನನಸಾಗಿಸುವ ಇಚ್ಛಾಶಕ್ತಿಯನ್ನು ಹೊಂದಿದವರಾಗಿದ್ದಾರೆ. ಅವರು ಅವರ ಕಾಲಘಟ್ಟದ ಅತ್ಯಂತ ಸೂಕ್ಷ್ಮ ಪ್ರವೃತ್ತಿಯ ಮತ್ತು ಮಾನವೀಯ ಮೌಲ್ಯಗಳ ಸ್ಪಂದನದ ನಾಯಕರಾಗಿದ್ದಾರೆ. ಸೂಕ್ಷ್ಮ ಗ್ರಾಹಿತ್ಯದ ಅಧ್ಯಯನ ಶೀಲ ನಾಯಕರಾಗಿ ಮೊಯಿಲಿಯವರು ತಮ್ಮ ಕಿರಿಯ ವಯಸ್ಸಿನಲ್ಲಿಯೇ ರಾಜಕೀಯ ವಾಸ್ತವಗಳನ್ನು ಅರಿತುಕೊಂಡವರಾಗಿದ್ದರೆಂದು ಅವರು ಹೇಳುತ್ತಿರುತ್ತಾರೆ. "ಕಾರಿನಲ್ಲಿ ಪ್ರಯಾಣಿಸುವಾಗಿನ ಒಂದಿಷ್ಟು ಚಿಕ್ಕಪುಟ್ಟ ತೂಕಡಿಕೆಗಳೇ ನಾನು ಪಡೆಯುತ್ತಿರುವ ನಿದ್ದೆ!". ಒರ್ವ ಧೀರನ ನಿಷ್ಠುರವಾದ ಬದ್ಧತೆಯ ಉತ್ತಮ ಹಾಸ್ಯದೊಂದಿಗೆ ಸಂತುಲಿತವಾಗುವ ಅತ್ಯುತ್ಸಾಹವು ಅವರಲ್ಲಿದೆ. ಅವರು ಭಾರತದ ಹೃದಯ ಮತ್ತು ಅಂತರಾತ್ಮಗಳು ನಿಜವಾದ ಪ್ರತಿನಿಧಿ.

ಸುಳಿಗಾಳಿ ಸಾಮಾಜಿಕ ಕಾದಂಬರಿಯಾಗಿದೆ. "ಕನ್ನಡದ ಮೊದಲ ಸಾಮಾಜಿಕ ಕಾದಂಬರಿಗಳಲ್ಲಿ ಎದ್ದು ಕಾಣುವ ಅಂಶಗಳೆಂದರೆ ಅವುಗಳ ಸಮಕಾಲೀನ ಪ್ರಜ್ಞೆ ಮತ್ತು ಸಾಮಾಜಿಕ ಕಳಕಳಿ"[1] ಇದನ್ನು ಸ್ಪಷ್ಟವಾಗಿ ಈ ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ. ಮೊಯಿಲಿಯವರು ಸಮಾಜದ ಕೆಲವು ಮಗ್ಗಲುಗಳನ್ನು ಚಿತ್ರಿಸುತ್ತಾ ಸಮಾಜದಲ್ಲಿ ಬಾಳ್ವೆ ವ್ಯವಸ್ಥೆಗೆ ಒಗ್ಗಿಕೊಂಡಾಗ ಸ್ಥಿರವಾಗುತ್ತದೆ, ನಿಷ್ಕ್ರಿಯವಾಗುತ್ತದೆ. ಆದರೆ ಅದು ಚಲನೆಯನ್ನು ಬಯಸಿದಾಗ ಅದರಲ್ಲಿಯೂ ಆದರ್ಶದ ಬೆನ್ನು ಹತ್ತಿದಾಗ ಮೌಲ್ಯದ ನೆರಳನ್ನು ಬಯಸಿದಾಗ ಜೀವನ ಸುಳಿಗಾಳಿಯ ಪರಧಿಗೆ ತಲುಪುತ್ತದೆ. ಆಗ ನಡೆಯುವ ಸಮುದ್ರ ಮಂಥನದಿಂದ ಸಮಾಜದಲ್ಲಿ ವಿಷವೂ ಬರುತ್ತದೆ. ಸಂಯಮದಿಂದ ಕಾದು ನಿಂತವರಿಗೆ ಅಮೃತವೂ ಸಿಗುತ್ತದೆ. ಅಂತಹ ಮನಸ್ಸಿನ ನಿಶ್ಚಲತೆಯಿಂದ ಮಾನವ ತನ್ನ ಜೀವನದ ಗುರಿಯನ್ನು ಸಾಧಿಸುತ್ತಾನೆ. ಸಿದ್ಧಾಂತದ ನೆರಳಿಲ್ಲದ ಜೀವನ ಚುಕ್ಕಾಣಿಯಿಲ್ಲದ

ನಾವೆಯಂತೆ, ಮಾನವ ತನ್ನ ಸುತ್ತಾ ನಿರ್ಮಿಸಿದ ಅಷಾಡಭೂತಿ ಸಮಾಜದಲ್ಲಿ ಹಾಯಾಗಿರುವೇನೆಂದು ಭಾವಿಸುತ್ತಾನೆ. ಆದರೆ ತನ್ನ

ಸುತ್ತಾ ಬೆಳೆದಿರುವುದು ಘಟಸರ್ಪಕ್ಕೆ ಆಶ್ರಯ ಕೊಡುವ ಭೀಕರವಾದ ಹುತ್ತವೆಂದು ಅವನಿಗೆ ಅರಿವಾಗುವುದಿಲ್ಲ. ಸಮಾಜದ ಅಷಾಢಭೂತಿ ಪದರವನ್ನು ಕಿತ್ತೊಗೆದು ಸಮಾಜದ ನೈಜ ರೂಪವನ್ನು ಕಾಣಲು ಮೌಲ್ಯಧಾರಿತ ಹರಿತವಾದ ಅಸ್ತ್ರ ಅಗತ್ಯ. ಸಮಾಜ ಇಂತಹ ಶಸ್ತ್ರಚಿಕಿತ್ಸೆಯನ್ನು ಮಾಡಬೇಕಾದರೆ ಕಾಠಿಣ್ಯತೆಬೇಕು. "ಮೌಲ್ಯಾಧಾರಿತ ಸಮಾಜ ಸ್ಥಾಪನೆಗೆ ನಿರಂತರ ಹೋರಾಟದ ಅಗತ್ಯವಿದೆಯೇ ಹೊರತು ವ್ಯವಸ್ಥೆಯ ಸಮಾಜದ ರಕ್ಷಣೆ ಅಲ್ಲ" ಎಂದು ಕಾದಂಬರಿಕಾರರು ಹೇಳುವ ಮಾತಿನಂತೆ ಕಾದಂಬರಿ ಸಾಗುತ್ತಾ ಹೋಗುತ್ತದೆ. ಕಾದಂಬರಿಯ ಮೂಲ ಉದ್ದೇಶವು ಅದೇ ಆಗಿದೆ.
ವೀರಪ್ಪ ಮೊಯಿಲಿಯವರ ಎರಡನೆಯ ಕಾದಂಬರಿಯಾದ 'ಸಾಗರದೀಪ'ವು ಸಾಮಾಜಿಕ ಕಥಾವಸ್ತುವನ್ನು ಒಳಗೊಂಡಿದ್ದು, ಕರಾವಳಿ ಕರ್ನಾಟಕದ ಮೊಗವೀರ ಜನಾಂಗದ ಹತ್ತು ಹಲವು ಮುಖಗಳನ್ನು ಪರಿಚಯಿಸುವ ಕಾದಂಬರಿಯಾಗಿದೆ. ಎಂ. ವೀರಪ್ಪ ಮೊಯಿಲಿಯವರದು ಬಿಡುವಿಲ್ಲದ ರಾಜಕೀಯ ಬದುಕು. ಇದರ ನಡುವೆ ಸಮಯ ಸಿಕ್ಕಾಗಲೆಲ್ಲ ತಮ್ಮ ಸೃಜನಶೀಲತೆಗೆ, ವೈಚಾರಿಕತೆಯನ್ನು ತಮ್ಮ ದೃಷ್ಟಿಕೋನವನ್ನು ದಾಖಲಿಸುತ್ತಾ ಸಾಹಿತ್ಯ ಸೃಷ್ಟಿಯನ್ನು ಮಾಡಿದ್ದಾರೆ. ಮೊಯಿಲಿಯವರ ಸಾಗರದೀಪ ಒಂದು ಸಾಮಾಜಿಕ ಕಾದಂಬರಿಯಾಗಿದೆ. ಸಾಹಿತ್ಯ ಸಾಮಾಜಿಕ ಬದುಕಿಗೆ ಸ್ಪಂದಸಿಲೇಬೇಕಾದ ಅನಿವಾರ್ಯತೆ ಇಂದು ಹೆಚ್ಚಾಗಿದೆ. ಯಾವುದೇ ಸಾಹಿತಿ ಉತ್ತಮ ಕೃತಿಯನ್ನು ರಚಿಸಬೇಕಾದರೆ ಆತನಿಗೆ ತಾನು ವಾಸಿಸುವ ಪರಿಸರದ ಆಳವಾದ ಜೀವನಾನುಭವನ್ನು ಪಡೆದುಕೊಂಡಿರಲೇಬೇಕು. ಇಂತಹ ಅನುಭವಗಳ ಹಿನ್ನಲೆಯಲ್ಲಿ ಮೂಡಿಬಂದ ಸಾಹಿತ್ಯ ಕೃತಿಗಳು ಜನಪರ ಸಾಹಿತ್ಯವಾಗಿರುತ್ತದೆ. "ಸಾಹಿತ್ಯವು ಜನಜೀವನದ ರನ್ನಗನ್ನಡಿ ಯಾಗಿರಬೇಕಲ್ಲದೇ, ಜನತೆಯ ದುಃಖ ಸಮಸ್ಯೆಗಳನ್ನು ಪರಿಹರಿಸಬಲ್ಲ ಸಾಧನವೂ ಆಗಬೇಕೆಂಬ ತತ್ವ ಪ್ರತಿಪಾದನೆಯಾಗುತ್ತಲಿದೆ" ಈ ಮಾತು ಅಕ್ಷರಶಃ ಮೊಯಿಲಿಯವರಿಗೆ ಅನ್ವಯವಾಗುತ್ತದೆ.

ವೀರಪ್ಪ ಮೊಯಿಲಿಯವರು ಮೀನುಗಾರ ಸಮುದಾಯದ ಹಲವು ಮೊಗ್ಗಲುಗಳನ್ನು ಕಥನ ರೂಪದಲ್ಲಿ ಭಿನ್ನ ಸಂವೇದನೆಗಳಿಂದ ಯಶಸ್ವಿಯಾಗಿ ಈ ಕಾದಂಬರಿಯನ್ನು ಕಟ್ಟಿಕೊಟ್ಟಿದ್ದಾರೆ. "ಸಾಹಿತ್ಯವು ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ. ಸಾಹಿತಿಯು ಆ ಸಮಾಜದ ಒಂದು ಅನಿವಾರ್ಯವಾದ ಅಂಗವಾಗಿರುವುದರಿಂದ ಮತ್ತು ತನ್ನ ಸಾಮಾಜಿಕ ಸಂಪರ್ಕ ಮಾಧ್ಯಮವಾದ ಭಾಷಾಯಿಂ ಮೂಲಾಂಶವೇ ತನ್ನ ಸಾಮಾಜದೊಂದಿಗೆ ಕೃತಿ ಮುಖೇನ ವ್ಯವಹರಿಸುತ್ತಾನೆ."40 ಇಲ್ಲಿ

ಮೊಯಿಲಿಯವರು ಈ ಕೆಲಸವನ್ನು ಯಶಸ್ವಿಯಾಗಿ ಸಾಧಿಸಿದ್ದಾರೆ.

ವೀರಪ್ಪ ಮೊಯಿಲಿಯವರ ಮೂರನೆಯ ಕಾದಂಬರಿಯಾದ ಕೊಟ್ಟವು ಬುಡಕಟ್ಟು ಜನಾಂಗಗಳಾದ ಕೊರಗರ ಮತ್ತು ಜೇನುಕುರುಬರ ಜೀವನ ಕಥನಗಳನ್ನು ಒಳಗೊಂಡ ಕೃತಿಯಾಗಿದೆ. ಕಾದಂಬರಿಯ ಕಥೆಯ ಜೊತೆಜೊತೆಗೆ ಬುಡಕಟ್ಟು ಜನಾಂಗದ ಅನೇಕ ಮಾಹಿತಿಗಳನ್ನು ನೀಡುವ ಸಂಶೋಧನಾ ಕೃತಿಯಂತೆಯೂ ಕಂಡುಬರುತ್ತದೆ. ವೀರಪ್ಪ ಮೊಯಿಲಿಯವರ ಮೂರನೆಯ ಕಾದಂಬರಿಯಾದ 'ಕೊಟ್ಟ'ವು ಕೊರಗ ಜನಾಂಗವನ್ನು ಪರಿಚಯಿಸುವ ಉದ್ದೇಶವನ್ನು ಇಟ್ಟುಕೊಂಡು ರಚನೆಯಾಗಿದೆ. ಆಶಾ ಸಾಹಿತ್ಯ ಪ್ರಕಾಶನ ಬೆಂಗಳೂರು ಇವರಿಂದ ಪ್ರಕಟಣೆಗೊಂಡಿದೆ. 1993ರಲ್ಲಿ ಪ್ರಕಟಣೆಗೊಂಡ ಇದು 1994ರಲ್ಲಿ ಎರಡನೆಯ ಮುದ್ರಣವನ್ನು ಕಂಡಿರುವುದು ಈ ಕಾದಂಬರಿಯ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಚೈತನ್ಯ ಹಾಗೂ ಸ್ಫೂರ್ತಿನೀಡಿ ಬದುಕನ್ನು ಅಮೃತವಾಗಿಸಿರುವ ಪತ್ನಿ ಮಾಲತಿಗೆ ಒಲವಿನ ಉಡುಗೊರೆ ಎಂದು ಈ ಕಾದಂಬರಿಯನ್ನು ಮೊಯಿಲಿಯವರು ತಮ್ಮ ಪತ್ನಿಗೆ ಅರ್ಪಿಸಿದ್ದಾರೆ. ಉಪ ಮಾನವರ ಸ್ತರದಲ್ಲಿ ಬಿಸಾಡಲಾದ ಕೊರಗ ಜನಾಂಗದ ಜೀವನದ ಅನುಭವ ದ್ರವ್ಯಕ್ಕೆ ಕನ್ನಡ ಸಾಹಿತ್ಯದ, ಅದರಲ್ಲೂ ಕನ್ನಡ ಅಕ್ಷರದ ಸ್ಪರ್ಶ ಮೂಡಿಸಿದ ಮೊಯಿಲಿ ಅವರ ಕಾದಂಬರಿ 'ಕೊಟ್ಟ' ಒಂದು ಅಪರಿಚಿತ ಮಾನವಲೋಕವನ್ನು ತೆರೆದಿಡುತ್ತದೆ ಎಂಬುದನ್ನು ಪ್ರತ್ಯೇಕವಾಗಿಯೇ ಹೇಳಬೇಕಾಗುತ್ತದೆ. "ಮಾನವರೆ ಅಲ್ಲವೆಂಬ ಮಾನಸಿಕ ತೀರ್ಮಾನದ ಅಧಃಪತನದ ಚಿತ್ರವನ್ನು ಬಿಡಿಸುತ್ತ ನಡೆಯುವ ಕಾದಂಬರಿಯ ಸಂಯಮದ ಬರವಣಿಗೆಯ ನಡೆ, ಓದುಗನೊಂದಿಗೆ ನಡೆದುಹೋಗುತ್ತದೆ. ಆದರೆ, ಆ ನಡೆಯ ಹಿಂದೆ, ಅದೇ ಉಪಮಾನವ ಸ್ತರದ ಆತ್ಮಗಳಲ್ಲಿ ಲೋಕಾರ್ಹತೆಯ ಅರಿವು ಹಿಂಬಾಲಿಸಿ ಬರುವುದನ್ನು ಕೂಡ ಕಾದಂಬರಿಯ ಒಟ್ಟಂದದ ಸಂವಹನ ಕ್ರಿಯೆಯಿಂದ ಗ್ರಹಿಸಬೇಕಾಗುತ್ತದೆ."

ವೀರಪ್ಪ ಮೊಯಿಲಿಯವರ ನಾಲ್ಕನೇಯ ಕಾದಂಬರಿಯಾದ ತೆಂಬರೆ ಕರಾವಳಿ ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಸಂಪ್ರದಾಯವಾದ ಭೂತಾರಾಧನೆಯ ಸುತ್ತ ಹೆಣದುಕೊಂಡ ಕಥೆಯಾಗಿದೆ. ವೀರಪ್ಪ ಮೊಯಿಲಿಯವರ ನಾಲ್ಕನೆಯ ಕಾದಂಬರಿಯಾದ ತೆಂಬರೆಯು 1999ರಲ್ಲಿ ಬೆಂಗಳೂರಿನ ಅಂಕಿತ ಪುಸ್ತಕ ಪ್ರಕಾಶನದಿಂದ ಪ್ರಕಟಣೆಗೊಂಡಿದೆ. ಈ ಕಾದಂಬರಿಯನ್ನು ವೀರಪ್ಪ ಮೊಯಿಲಿಯವರು ಬದುಕಿಗೆ ಆಸರೆಯಾಗಿ ನಿಂತು ದಾರಿ ತೋರಿಸಿದ ತಮ್ಮ ಅಣ್ಣನಾದ ಎಂ.ನಾರಾಯಣ ದೇವಾಡಿಗರಿಗೆ ಅರ್ಪಿಸಿದ್ದಾರೆ. ಜೀವಂತವಾದ ಸಾಹಿತ್ಯ ಪರಂಪರೆಯಲ್ಲಿ, ಸಾಹಿತ್ಯಕ ತಾತ್ವಿಕ ಪ್ರೇರಣೆಗಳು ಎಲ್ಲಿಂದ ಬಂದರೂ ಸರಿ, ಅವು ಸ್ಥಳೀಯ ಅನುಭವ ಲೋಕ ಹಾಗೂ ವರ್ತಮಾನದ ತುರ್ತುಗಳ ಮೂಲಕವೇ ಮರುಹುಟ್ಟು ಪಡೆಯಬೇಕು. ಈ ಮರುಹುಟ್ಟಿನ ಜತೆಯಲ್ಲಿ ಹೊಸ ಸಾಹಿತ್ಯ ತತ್ವವೂ ಹುಟ್ಟಿ ಬಿಡುತ್ತದೆ.62

ದಕ್ಷಿಣ ಕನ್ನಡ ಜಿಲ್ಲೆಯ ಎರಡು ವಿಶಿಷ್ಟ ಸಾಂಸ್ಕೃತಿಕ ಸಂಗತಿಗಳೆಂದರೆ ಯಕ್ಷಗಾನ ಮತ್ತು ಭೂತಾರಾಧನೆ. ದಕ್ಷಿಣ ಕನ್ನಡದ, ಜನತೆಯ ಅವಿಭಾಜ್ಯ ಅಂಗವಾಗಿರುವ ಭೂತಾರಾಧನೆ ಅನೇಕ

ಅಂತರ್‌ವೈರುಧ್ಯಗಳಿಂದ ಕೂಡಿದ ಒಂದು ಪರಂಪರಾಗತ ಧಾರ್ಮಿಕ – ಸಾಂಸ್ಕೃತಿಕ ಆಚರಣೆ: ತಮ್ಮ ಜನಾಂಗದ ಒಳಿತಿಗಾಗಿ ಯಾವುದಾದರೂ ಒಂದು ಬಗೆಯಲ್ಲಿ ಶ್ರಮಿಸಿ, ಆ ಕಾರಣದಿಂದಾಗಿಯೇ ಜೀವತೆತ್ತ ಜನಾಂಗಿಕ ನಾಯಕರನ್ನು, ನಾಯಕಿಯರನ್ನು ಮರಣಾನಂತರವೂ ಪೂಜಿಸಿ, ಇಷ್ಟಾರ್ಥ ಸಿದ್ಧಿಯನ್ನು ಪಡೆಯುವ ವಿಧ್ಯುಕ್ತ ಕ್ರಿಯೆ. ಇಲ್ಲ ಗಮನಿಸಬೇಕಾದ ಕುತೂಹಲದ ಸಂಗತಿಯೆಂದರೆ, ಈ ರೀತಿ ಮೃತ ಅಥವಾ ಭೂತಗಳ ಆರಾಧನೆ ನಡೆಸುವವರು ಸಮಾಜದ ಮೇಲ್ವರ್ಗದ ಜನರು ಎಂದರೆ ಆ 'ಭೂತಗಳ' ಸಾವಿಗೆ ಈ ಲೋಕದಲ್ಲಿ ಕಾರಣರಾದವರೇ. ವಿಧ್ಯುಕ್ತವಾಗಿ ಭೂತಾರಾಧನೆಯನ್ನು ಮಾಡುವವರು ಸಮಾಜದಲ್ಲಿ ಅತ್ಯಂತ ಕೆಳಗಿರುವ ಪಂಬದ, ಪರವ, ನಲಿಕೆ ಇತ್ಯಾದಿ ಪಂಚಮ ವರ್ಗದವರು. ಎಂದರೆ ಊಂಊಕರ ಇಷ್ಟಾರ್ಥ ಸಿದ್ಧಿಗಾಗಿ ಶೋಷಿತರೇ ಶೋಷಣೆಯಿಂದ ಮೃತ ರಾದವರನ್ನು ಆರಾಧಿಸುವ ಒಂದು ಸಂಕೀರ್ಣ, ಸಂದಿಗ್ಧಪೂರ್ಣ ಆಚರಣೆ ಭೂತಾರಾಧನೆ. 'ತೆಂಬರೆ'ಕಾದಂಬರಿ ಈ ರೀತಿ ಪಂಜುರ್ಲಿ ಭೂತವನ್ನು ಕಟ್ಟುವ (ಆ ಭೂತವನ್ನು ತಮ್ಮಲ್ಲಿ ಆಹ್ವಾನಿಸಿಕೊಳ್ಳುವ) ಪಂಬದ ಜನಾಂಗದ ಬದುಕನ್ನು ಚಿತ್ರಿಸುತ್ತದೆ.

ಹೀಗೆ, ಮೊಯಿಲಿ ಅವರು ಕಾದಂಬರಿಗಳ ಮೂಲಕ ಕನ್ನಡ ಸಾರಸ್ವತಲೋಕಕ್ಕೆ ಸೇವೆ ಸಲ್ಲಿಸಿದರು, ಅವರ ವಿನಯವಂತಿಕೆ ಮೆಚ್ಚುವಂತದ್ದಾಗಿದೆ. ಏಕೆಂದರೆ ಸಾಹಿತ್ಯ ಸೇವೆಯಲ್ಲಿ ನನ್ನದು ಅಳಿಲು ಸೇವೆ, ಕನ್ನಡ ಸಂಸ್ಕೃತಿಯ ಮಹಾಸೇತುವಿನ ರಚನೆಯಲ್ಲಿ ಇದೊಂದು ಅಣುವಿನಷ್ಟೇ ಎನ್ನುವ ಅಪರೂಪದ ಸಾಹಿತಿ ಮೊಯಿಲಿ. ಅವರ ಸಮಾಜಮುಖಿ ಸಾಹಿತ್ಯವನ್ನು ಸಂಶೋಧನೆ ಮಾಡುವುದು ಮುಂದಿನ ಜನಾಂಗಕ್ಕೆ ದಾರಿದೀಪವಾಗಲಿದೆ.

1. ಚೆನ್ನಣ್ಣ ವಾಲೀಕಾರ, ಕನ್ನಡ ಕಾದಂಬರಿಗಳು, ಪ್ರಚಾರೋಪನ್ಯಾಸ ಮಾಲೆ–146, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, 1999
2. ಜಿ.ಎಸ್.ಅಮೂರ, ನಿರಂತರ–ಸಾಹಿತ್ಯ ವಿಮರ್ಶೆ, ಸಪ್ನ ಬುಕ್ ಹೌಸ್, ಬೆಂಗಳೂರು, 2010
3. ಎಚ್.ಟಿ. ಪೋತೆ, (ಸಂ), ಎಂ.ವೀರಪ್ಪ ಮೊಯಿಲಿ ಅವರ ಶ್ರೀರಾಮಾಯಣ ಮಹಾನ್ವೇಷಣಂ ದರ್ಶನ – ತಿಪ್ಪಣ್ಣಂಬು ಪ್ರಕಾಶನ, ಹಂಜಗಿ ತಾ. ಇಂಡಿ, ಜಿ. ಬಿಜಾಪುರ, 2002
4. ಎಂ. ವೀರಪ್ಪ ಮೊಯಿಲಿ; ತೆಂಬರೆ, ಅಂಕಿತ ಪುಸ್ತಕ, ಬಸವನ ಗುಡಿ, ಬೆಂಗಳೂರು, 1999.
5. ವಿವೇಕ ರೈ. – ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು– ಪ್ರಸಾರಾಂಗ, ಮಂಗಳೂರು ವಿ.ವಿ., ಮಂಗಳೂರು, 1987
6. ಎಂ. ವೀರಪ್ಪ ಮೊಯಿಲಿ–ಸುಳಿಗಾಳಿ–ಐ.ಬಿ.ಹೆಚ್. ಪ್ರಕಾಶನ ಬೆಂಗಳೂರು
7. ಸಿ.ಎನ್. ರಾಮಚಂದ್ರನ್– ಸಾಹಿತ್ಯ ವಿಮರ್ಶೆ– ಕರ್ನಾಟಕ ಸಾಹಿತ್ಯ ಅಕಾಡಿಮೆ, ಬೆಂಗಳೂರು
8. ಚಂದ್ರಶೇಖರ ಕಂಬಾರ ಮತ್ತು ಸಿ.ಆರ್. ಗೋವಿಂದರಾಜು, ತೆಂಬರೆಯ ತರಂಗ–ಅಕ್ಕ ಪ್ರಕಾಶನ, ಕುವೆಂಪುನಗರ, ಕುಣಿಗಲ್ಲು, 2007

9. ಎಂ.ವೀರಪ್ಪ ಮೊಯಿಲಿ–ಸಾಗರದೀಪ–ಐ.ಬಿ.ಹೆಚ್. ಪ್ರಕಾಶನ ಬೆಂಗಳೂರು

10. ಪುರುಷೊತ್ತಮ ಬಿಳಿಮಲೆ– ಕೊರಗರ ಸಂಸ್ಕೃತಿ–(ಉಪಸಂಸ್ಕೃತಿ ಅಧ್ಯಯನ)–ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು

11. ರಹಮತ್ ತರೀಕೆರೆ– ಪ್ರತಿ ಸಂಸ್ಕೃತಿ–ಧರಣಿ ಪ್ರಿಂಟರ್ಸ್, ಬೆಂಗಳೂರು, 2010